ಮೂರು ವರ್ಷಗಳಾದರೂ ಈ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈ ಪೈಪು ಚಾನಲ್ ಮೂಲಕ ಮುಂದೆ ಹರಿಯುವ ಪೂರ್ಣ ನೀರು ಪರಿಶಿಷ್ಟ ಪಗ೯ ಮತ್ತು ಸಣ್ಣ ಹಿಡುವಳಿದಾರರಾದ ಬಡ ರೈತರ ಜಮೀನುಗಳಿಗೆ ಹಾಯುತ್ತದೆ. ಈ ಕೆರೆ ಪ್ರತಿವರ್ಷ ತುಂಬುತ್ತಿದ್ದು ಈ ಪೈಪು ಚಾನಲ್‌ಗೆ ಮುಂದೆ ಇರುವ ಶ್ರೀಮಂತ ಆಚ್ಚುಕಟ್ಟುದಾರರು ಮಾತ್ರ ಲಾಭ ಪಡೆಯುತ್ತಿದ್ದಾರೆ. ಆಕಡೆ ಕೆರೆಯ ಅಚ್ಚುಕಟ್ಟಿಗೆ ಸೇರಿದ ಪರಿಶಿಷ್ಟ ಜಾತಿ ಮತ್ತು ಸಣ್ಣ ಹಿಡುವಳಿದಾರರಾದ ಬಡ ರೈತರು ಈ ಪೈಪು ಚಾನಲ್ ಇಲ್ಲದ ಕಾರಣ ನೀರನ್ನು ಪಡೆದು ವ್ಯವಸಾಯ ಮಾಡಲು ಸಾಧ್ಯವಿಲ್ಲದೆ ಅನ್ಯಾಯವಾಗಿರುತ್ತದೆ ಆದ್ದರಿಂದ ಈ ಬಡ ಜನರಿಗೆ ನ್ಯಾಯವಾಗಿ ದೊರೆಯಬೇಕಾದ ನೀರನ್ನು ಪಡೆದು ಅನುಕೂಲ ಹೊಂದಲು ಸಾಧ್ಯವಾಗುವಂತೆ ಬೇಗ ಈ ಪೈಪು ಚಾನಲ್‌ನ್ನು ಮಾಡಿಸಿಕೊಡಬೇಕಾಗಿ ಈ ಮೂಲಕ ಲೋಕೋಪಯೋಗಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಲೋಪಯೋಗಿ ಖಾತೆ ಸಚಿವರ ಗಮನಕ್ಕೆ ತಂದು ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(3) ಬೆಂಗಳೂರೂರಿನಲ್ಲಿ ನಡೆದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ ಸದಸ್ಯರ ಸಮ್ಮೇಳನಕ್ಕೆ ತಗಲಿರುವ ವೆಚ್ಚ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳ ೩೧ರಂದು ಬೆಂಗಳೂರಿನಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರುಗಳ ಸಮ್ಮೇಳನ ನಡೆಯಿತು. ಸುಮಾರು ೬೦ ಸಾವಿರ ಜನರಿಗೆ ಊಟ-ವಸತಿ ಒದಗಿಸಲು ಲಕ್ಷಾಂತರ ರೂಪಾಯಿ ಸರ್ಕಾರ ವತಿಯಿಂದ ಖರ್ಚಾಯಿತು. ಈ ಬಾಬಿಗೋಸ್ಕರ ಎಷ್ಟು ಹಣವನ್ನು ನಿಗಾಮಾಡಲಾಗಿತ್ತು ? ಆ ಪೈಕಿ ಎಷ್ಟು ಹಣ ಖರ್ಚಾಯಿತು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಯಾವುದಾದರೂ ಉದ್ದೇಶಗಳು ಸಾಧನೆ ಆಗಬೇಕಾದರೆ ಇಂಥ ಸಮ್ಮೇಳನಗಳು ಅವಶ್ಯಕ. ಆದರೆ ಮೊನ್ನೆ ಮಾಡಿದಂಥ ಸಮ್ಮೇಳನದಿಂದ ಯಾವುದೇ ಉದ್ದೇಶವೂ ನನಗೆ ತಿಳಿದಮಟ್ಟಿಗೆ ಸಾಧನೆ ಆಗಿಲ್ಲ ಕೇವಲ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಸಚಿವರು ಹಾಗೂ ಮುಖ್ಯ ಮಂತ್ರಿಗಳು ಮಾಡಿದಂಥ ಭಾಷಣವನ್ನು ಬಿಟ್ಟರೆ ಬೇರೆ ಯಾವ ಉದ್ದೇಶ ಸಾಧನೆಯೂ ಆಗಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಸದಸ್ಯರ ಸಮ್ಮೇಳನಗಳನ್ನು ಆಯಾಯ ಜಿಲ್ಲೆಗಳಲ್ಲೇ ಸಮಾವೇಶಗೊಳಿಸಿ ಆ ಸದಸ್ಯರುಗಳು ಯಾವ ರೀತಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಬೇಕು, ಅವರ ಕರ್ತವ್ಯಗಳೇನು ? ಮುಂತಾದುವುಗಳ ಬಗ್ಗೆ ತಿಳುವಳಿಕೆಯನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಮತ್ತು ಹಣವೂ ಕೂಡ ಉಳಿತಾಯವಾಗುತ್ತಿತ್ತು. ನೀವು ಮಾಡಿದಂಥ ಸಮ್ಮೇಳನದಿಂದಾಗಿ ಸರ್ಕಾರದ ಹಣ ಪೋಲಾಯಿತೇ ಹೊರತು ಮತ್ತೆ ಯಾವುದೇ ಪ್ರಯೋಜನವೂ ಆಗಲಿಲ್ಲ. ಸರ್ಕಾರ ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಈ ಒಂದು ಸಮ್ಮೇಳನವನ್ನು ಮಾಡಿತೆಂದು ನನಗನ್ನಿಸುತ್ತದೆ. ಆದ್ದರಿಂದ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಈ ಬಗ್ಗೆ ಸದನಕ್ಕೆ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೆ, ವಿವರಗಳನ್ನು ತರಿಸಿ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸುತ್ತೇನೆ.

(4) ಮೈಸೂರಿನ ಪ್ರೀಮಿಯರ್ ಸ್ಟುಡಿಯೊ ಮಾಲೀಕರು ಅನಧಿಕೃತ ಕಟ್ಟಡ ಕಟ್ಟಿರುವ ಬಗ್ಗೆ

ಶ್ರೀ ವೇದಾಂತ ಹೆಬ್ಬಿಗೆ,—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿನ ಪ್ರೀಮಿಯರ್ ಸ್ಟುಡಿಯೋ ಮಾಲೀಕರು ಪರವಾನೆ ಇಲ್ಲದೆ ಅನಧಿಕೃತ ಕಟ್ಟಡಗಳನ್ನು ಕಟ್ಟಿರುವುದಲ್ಲದೆ ಸ್ಟುಡಿಯೋಗಾಗಿ ಪರವಾನೆಯಿತ್ತಿರುವುದನ್ನು ದುರುಪಯೋಗಪಡಿಸಿಕೊಂಡು ಅಲ್ಲಿಯ ಷೂಟಿಂಗ್ ಫ್ಲೋರ್‌ಗಳನ್ನು ಕಾರ್ಯಾನೆ ಹಾಗೂ ಸಾರಾಯಿ ಭಾಸ್ಕ್ಯಾನಿಗೆ ಬಾಡಿಗೆ ಇತ್ತಿರುವ ಬಗ್ಗೆ ಮೈಸೂರು ನಗರ ಯೋಜನಾ ಪ್ರಾಧಿಕಾರ ೨ ವರ್ಷಗಳ ಹಿಂದೆ ಸರ್ಕಾರದ ಗಮನಕ್ಕೆ ತಂದು ಸರ್ಕಾರವು ಶ್ರೀ ಮೇಲುಕೋಟೆ ಎಂಬ ಅಧಿಕಾರಿಯವರನ್ನು ನೇಮಕ ಮಾಡಿ ತನಿಖೆ ನಡೆಸಿ ವರದಿ ಕೇಳಿತ್ತು. ಶ್ರೀ ಮೇಲ್ಕೋಟೆಯವರು